**ಕರ್ನಾಟಕ ವಿಧಾನ ಪರಿಷತ್ತು**

| | | |
|---|---|---|
| ಸದಸ್ಯರ ಹೆಸರು | : | ಶ್ರೀ ಕೆ. ಎಸ್. ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 194 (286) |
| ಉತ್ತರಿಸುವ ಸಚಿವರು | : | ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು |
| ಉತ್ತರಿಸಬೇಕಾದ ದಿನಾಂಕ | : | 12-08-2025 |

*****

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯ ಸರ್ಕಾರದಲ್ಲಿರುವ ಜವಳಿ ನೀತಿ ಏನು; ಜವಳಿ ಉದ್ಯಮದಲ್ಲಿ ಎಷ್ಟು ಕಾರ್ಮಿಕರು ಕಾರ್ಯನಿರ್ವಹಿಸುತ್ತಿದ್ದಾರೆ. (ವಿವರ ನೀಡುವುದು) | ರಾಜ್ಯದಲ್ಲಿ ಜವಳಿ ಹಾಗೂ ಸಿದ್ಧ ಉಡುಪು ಕ್ಷೇತ್ರದ ಅಭಿವೃದ್ಧಿಗಾಗಿ ರೂ.10,000 ಕೋಟಿಗಳ ಬಂಡವಾಳ ಹೂಡಿಕೆ ಹಾಗೂ 5ಲಕ್ಷ ಉದ್ಯೋಗದ ಸೃಜನೆಯ ಗುರಿಯೊಂದಿಗೆ ನೂತನ ಜವಳಿ ಮತ್ತು ಸಿದ್ಧ ಉಡುಪು ನೀತಿ 2019-24 ಯೋಜನೆಯು ಜಾರಿಯಲ್ಲಿರುತ್ತದೆ.<br><br>ಸದರಿ ಯೋಜನೆಯಡಿ ಜವಳಿ ಹಾಗೂ ಸಿದ್ಧ ಉಡುಪು ಘಟಕವನ್ನು ಸ್ಥಾಪಿಸುವ ಅರ್ಹ ಉದ್ದಿಮೆದಾರರಿಗೆ ವಿವಿಧ ಕಾಂಪೊನೆಂಟ್‌ಗಳಡಿ ಈ ಕೆಳಕಂಡ ಸೌಲಭ್ಯಗಳನ್ನು ನೀಡಲು ಅವಕಾಶವಿರುತ್ತದೆ.<br><br>• ಸಾಲಾಧಾರಿತ ಬಂಡವಾಳ ಸಹಾಯಧನ (10% ರಿಂದ 30% ಸಹಾಯಧನ ಒಟ್ಟು ಬಂಡವಾಳ ಹೂಡಿಕೆಯ ಮೇಲೆ)<br><br>• ಬಡ್ಡಿ ಸಹಾಯಧನ (ಮಧ್ಯಮ ಹಾಗೂ ಬೃಹತ್ ಜವಳಿ /ಸಿದ್ಧ ಉಡುಪು ಘಟಕಗಳಿಗೆ ಮೊದಲ 05 ವರ್ಷಗಳಿಗೆ ಅವಧಿ ಸಾಲಗಳ ಮೇಲೆ ವಾರ್ಷಿಕ ಶೇ.5 ರಷ್ಟು ಬಡ್ಡಿ ಸಹಾಯಧನ)<br><br>• ವಿದ್ಯುತ್‌ಚ್ಛಕ್ತಿ ಮರು ಪಾವತಿ ಸಹಾಯಧನ (ಅತಿ ಸಣ್ಣ ಮತ್ತು ಸಣ್ಣ ಘಟಕಗಳಿಗೆ ಪ್ರತಿ ಯುನಿಟ್‌ಗೆ ರೂ.1/- to 2/-ರಂತೆ ವಿದ್ಯುತ್ ವೆಚ್ಚದ ಮರುಪಾವತಿ)<br><br>• ಇ.ಎಸ್.ಐ & ಇ.ಪಿ.ಎಫ್ ಮರು ಪಾವತಿ ಸಹಾಯಧನ (ಶೇ.75 ರಷ್ಟು ಮಾಲೀಕರ ವಂತಿಕೆ ಮರುಪಾವತಿ)<br><br>• ವೇತನ ಸಹಾಯಧನ (ಸಿದ್ಧ ಉಡುಪು ಘಟಕಗಳಿಗೆ ಪ್ರತಿ ಕಾರ್ಮಿಕರಿಗೆ ರೂ.2,000/- ರಿಂದ ರೂ.3,000/- ವೇತನ ಸಹಾಯಧನ).<br><br>• ಶೇ.100 ರಷ್ಟು ಮುದ್ರಾಂಕ ಶುಲ್ಕ ವಿನಾಯಿತಿ & ಪ್ರತಿ ರೂ.1,000/-ಕ್ಕೆ ರೂ.1/-ರ ದರದಲ್ಲಿ ನೋಂದಣಿ ಶುಲ್ಕ ರಿಯಾಯಿತಿ. |

...2

| | | |
|---|---|---|
| | | • ತ್ಯಾಜ್ಯ ವಿಲೇವಾರಿ ಘಟಕಕ್ಕೆ ಶೇ.50 ರಷ್ಟು ಸಹಾಯಧನ ಅಥವಾ ಗರಿಷ್ಠ ರೂ.5.00 ಕೋಟಿ ಇವುಗಳಲ್ಲಿ ಯಾವುದು ಕಡಿಮೆಯೋ ಅದು.<br><br>ಜವಳಿ ಉದ್ಯಮದಲ್ಲಿ ಒಟ್ಟು 4,35,854 ಕಾರ್ಮಿಕರು ಕಾರ್ಯನಿರ್ವಹಿಸುತ್ತಿದ್ದಾರೆ. ವಿವರವನ್ನು **ಅನುಬಂಧದಲ್ಲಿ** ಒದಗಿಸಿದೆ. |
| (ಆ) | ಜವಳಿ ಉದ್ಯಮದಲ್ಲಿ ಕೆಲಸ ಮಾಡುತ್ತಿರುವ ನೇಕಾರರಿಗೆ ಈವರೆಗೆ ಎಷ್ಟು ನಿವೇಶನಗಳನ್ನು ನೀಡಲಾಗಿದೆ; ಸದರಿ ನೌಕರರಿಗೆ ನೀಡಲಾಗಿರುವ ನಿವೇಶನಗಳನ್ನು ನೋಂದಣಿ ಮಾಡಿಕೊಡಲಾಗಿದೆಯೇ; | ಜವಳಿ ಉದ್ಯಮದಲ್ಲಿ ಕೆಲಸ ಮಾಡುತ್ತಿರುವ ನೇಕಾರರಿಗೆ ಯಾವುದೇ ನಿವೇಶನಗಳನ್ನು ನೀಡಿರುವುದಿಲ್ಲ. |
| (ಇ) | ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲ್ಲೂಕಿನಲ್ಲಿ ಜವಳಿ ಪಾರ್ಕ್ ನಿರ್ಮಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಹಾಗಿದಲ್ಲಿ ಯಾವಾಗ ಜವಳಿ ಪಾರ್ಕ್ ನಿರ್ಮಿಸಲಾಗುವುದು? (ಸಂಪೂರ್ಣ ವಿವರ ಒದಗಿಸುವುದು) | ಹೊಸದುರ್ಗ ತಾಲ್ಲೂಕು, ಕಸಬಾ ಹೋಬಳಿ, ಅರಳೀಹಳ್ಳಿ ಗ್ರಾಮದ ರಿ.ಸ.ನಂ.26 ರ ಗೋಮಾಳ ಜಮೀನಿನಲ್ಲಿ 30–00 ಎಕರೆ ಜಮೀನಿನಲ್ಲಿ ಸಾರ್ವಜನಿಕ–ಖಾಸಗಿ ಸಹಭಾಗಿತ್ವ (ಪಿಪಿಪಿ) ಮಾದರಿಯಲ್ಲಿ ಜವಳಿ ಪಾರ್ಕ್ ಸ್ಥಾಪಿಸಲು ಪರಿಶೀಲನಾ ಹಂತದಲ್ಲಿರುತ್ತದೆ. ವಿವರವನ್ನು **ಅನುಬಂಧ–2** ರಲ್ಲಿ ಒದಗಿಸಿದೆ. |

**ಸಂಖ್ಯೆ: CI 177 JAKE 2025**

**(ಶಿವಾನಂದ ಎಸ್. ಪಾಟೀಲ)**
**ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು**

ಅನುಬಂಧ.

## Information obtained from Factories & Boilers Department

### District wise Garment Industries

| Sl. No. | District Name | No. of Factories | Male | Female | Total |
|---|---|---|---|---|---|
| 1 | Bangalore Urban | 835 | 78924 | 187633 | 266557 |
| 2 | Bangalore Rural | 47 | 8153 | 18310 | 26463 |
| 3 | Ramanagara | 18 | 3039 | 6934 | 9973 |
| 4 | Chitradurga | 6 | 1070 | 4309 | 5379 |
| 5 | Davanagere | 18 | 227 | 1624 | 1851 |
| 6 | Kolar | 11 | 1870 | 8434 | 10304 |
| 7 | Chikkaballapur | 15 | 958 | 7893 | 8851 |
| 8 | Shivamogga | 11 | 3032 | 6661 | 9693 |
| 9 | Tumakuru | 21 | 2340 | 10170 | 12510 |
| 10 | Chikkamagaluru | 1 | 19 | 19 | 38 |
| 11 | Dakshina Kannada | 5 | 79 | 164 | 243 |
| 12 | Udupi | 1 | 30 | 70 | 100 |
| 13 | Hassan | 8 | 3115 | 10064 | 13179 |
| 14 | Mandya | 12 | 2134 | 8180 | 10314 |
| 15 | Mysore | 14 | 3487 | 12408 | 15895 |
| 16 | Chamarajanagar | 1 | 89 | 811 | 900 |
| 17 | Belagavi | 7 | 226 | 561 | 787 |
| 18 | Bijapur | 2 | 15 | 235 | 250 |
| 19 | Dharwad | 8 | 1740 | 5035 | 6775 |
| 20 | Haveri | 5 | 532 | 1783 | 2315 |
| 21 | Uttara Kannada | 2 | 47 | 166 | 213 |
| 22 | Ballary | 23 | 540 | 145 | 685 |
| 23 | Kalburagi | 1 | 10 | 90 | 100 |
| 24 | Vijayanagara | 0 | 0 | 0 | 0 |
| 25 | Koppal | 2 | 62 | 40 | 102 |
| 26 | Bidar | 5 | | | 48 |
| 27 | Raichur | 2 | 21 | 2 | 23 |
| 28 | Madikeri | 0 | 0 | 0 | 0 |
| 29 | Yadgir | 0 | 0 | 0 | 0 |
| 30 | Gadag | 2 | 11 | 43 | 43 |
| 31 | Bagalkote | 6 | 49 | 196 | 245 |
| | Total | 1060 | 111249 | 291709 | 402958 |

ಮೂಲ: ಕೈಮಗ್ಗ ಮತ್ತು ಜವಳಿ ಇಲಾಖೆ

## Information obtained from Factories & Boilers Department

### District wise Textile Industries

| Sl. No. | District Name | No. of Factories | Male | Female | Total |
|---|---|---|---|---|---|
| 1 | Bangalore Urban | 168 | 8362 | 3235 | 11597 |
| 2 | Bangalore Rural | 26 | 2552 | 329 | 2881 |
| 3 | Ramanagara | 8 | 263 | 100 | 363 |
| 4 | Chitradurga | 5 | 58 | 40 | 98 |
| 5 | Davanagere | 1 | 205 | 295 | 500 |
| 6 | Kolar | 3 | 63 | 25 | 88 |
| 7 | Chikkaballapur | 2 | 83 | 123 | 206 |
| 8 | Shivamogga | 2 | 710 | 2800 | 3510 |
| 9 | Tumakuru | 12 | 243 | 103 | 346 |
| 10 | Udupi | 10 | 455 | 896 | 1351 |
| 11 | Hassan | 8 | 2054 | 2733 | 4787 |
| 12 | Mandya | 1 | 81 | 23 | 104 |
| 13 | Mysore | 12 | 1436 | 295 | 1731 |
| 14 | Chamarajanagar | 6 | 114 | 147 | 261 |
| 15 | Belagavi | 17 | 1923 | 369 | 2292 |
| 16 | Bagalkote | 17 | 233 | 73 | 306 |
| 17 | Dharwad | 4 | 101 | 224 | 325 |
| 18 | Gadag | 33 | 825 | 264 | 1089 |
| 19 | Haveri | 3 | 41 | 18 | 59 |
| 20 | Ballary | 3 | 266 | 30 | 296 |
| 21 | Kalburagi | 1 | 50 | 0 | 50 |
| 22 | Raichur | 3 | 263 | 23 | 286 |
| 23 | Dakshina Kannada | 2 | 42 | 105 | 147 |
| 24 | Uttara Kannada | 0 | 0 | 0 | 0 |
| 25 | Vijayapura | 12 | 93 | 130 | 223 |
| 26 | Chikkamagaluru | 0 | 0 | 0 | 0 |
| 27 | Yadgir | 33 | | | 0 |

| Sl. No. | District Name | No. of Factories | Male | Female | Total |
|---|---|---|---|---|---|
| 28 | Madkeri | 0 | 0 | 0 | 0 |
| 29 | Koppal | 8 | 62 | 40 | 102 |
| 30 | Vijayanagara | 1 | 7 | 4 | 11 |
| 31 | Bidar | | | | 0 |
| Total | | 345 | 20516 | 12380 | 32896 |

ಮೂಲ: ಕೈಮಗ್ಗ ಮತ್ತು ಜವಳಿ ಇಲಾಖೆ

## ಅನುಬಂಧ-2

### ಚಿತ್ರ ದುರ್ಗ ಜಿಲ್ಲೆಯ ಹೊಸದುರ್ಗ ತಾಲ್ಲೂಕಿನಲ್ಲಿ ಜವಳಿ ಪಾರ್ಕ್ ಸ್ಥಾಪಿಸುವ ಕುರಿತು

ಹೊಸದುರ್ಗ ವಿಧಾನಸಭಾ ಕ್ಷೇತ್ರದ ಕಸಬಾ ಹೋಬಳಿ, ಅರಳೀಹಳ್ಳಿ ಗ್ರಾಮದ ರಿ.ಸ.ನಂ.26 ರ ಗೋಮಾಳ ಜಮೀನಿನಲ್ಲಿ 30-00 ಎಕರೆ ಜಮೀನನ್ನು ಜವಳಿ ಉದ್ಯಮ ಅಭಿವೃದ್ಧಿ ಉದ್ದೇಶಕ್ಕೆ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಜವಳಿ ಮೂಲ ಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು ಇವರ ಹೆಸರಿಗೆ ಮಾನ್ಯ ಜಿಲ್ಲಾಧಿಕಾರಿಗಳು, ಚಿತ್ರದುರ್ಗ ಜಿಲ್ಲೆ ಇವರ ಅಧಿಕೃತ ಜ್ಞಾಪನ ಪತ್ರ ದಿನಾಂಕ:10.02.2025 ರಲ್ಲಿ ಹೊಸದುರ್ಗ ತಾಲ್ಲೂಕಿನಲ್ಲಿ ಕರ್ನಾಟಕ ರಾಜ್ಯ ಜವಳಿ ಮೂಲ ಸೌಲಭ್ಯ ಅಭಿವೃದ್ಧಿ ನಿಗಮ ವತಿಯಿಂದ ಜವಳಿ ಪಾರ್ಕ್ ನಿರ್ಮಿಸಲು 30-00 ಎಕರೆ ಜಮೀನನ್ನು ಷರತ್ತಿಗೊಳಪಟ್ಟು ಹಸ್ತಾಂತಸಿರುತ್ತಾರೆ.

ಜಿಲ್ಲಾಧಿಕಾರಿಗಳು, ಚಿತ್ರದುರ್ಗ ಜಿಲ್ಲೆರವರ ಅಧಿಕೃತ ಜ್ಞಾಪನ ಆದೇಶದ ಕ್ರಮ ಸಂಖ್ಯೆ:3 ರಲ್ಲಿ ಯಾವುದೇ ಕಾಲಕ್ಕೂ ಯಾವುದೇ ಕಾರಣಕ್ಕೂ ಪರಭಾರೆ ಮಾಡುವಂತಿಲ್ಲ ಎಂದು ಆದೇಶಿಸಲಾಗಿರುತ್ತದೆ. ಆದ್ದರಿಂದ, ಕರ್ನಾಟಕ ರಾಜ್ಯ ಜವಳಿ ಮೂಲಸೌಲಭ್ಯ ಅಭಿವೃದ್ಧಿ ನಿಗಮ, ಬೆಂಗಳೂರು ಈ ನಿಗಮದ ಹೆಸರಿನಲ್ಲಿ 30 ಎಕರೆ ಜಮೀನು ಇರುವುದರಿಂದ, ನಿಗಮದ ಹೆಸರಿನಲ್ಲಿರುವ ಜಮೀನನ್ನು ನೇರವಾಗಿ ಯಾವುದೇ ಉದ್ಯಮದಾರರಿಗೆ ಮಂಜೂರು ಅಥವ ಪರಭಾರೆ ಮಾಡಲು ಅವಕಾಶವಿರುವುದಿಲ್ಲ.

ಚಿತ್ರದುರ್ಗ ಜಿಲ್ಲೆ, ಹೊಸದುರ್ಗ ತಾಲ್ಲೂಕು, ಕಸಬಾ ಹೋಬಳಿ, ಅರಳೀಹಳ್ಳಿ ಗ್ರಾಮದ ರಿ.ಸ.ನಂ. 28 ರ ಜಮೀನಿನಲ್ಲಿ ಜಿಲ್ಲಾಧಿಕಾರಿಗಳ ಅನುಮತಿಯಂತೆ ಜವಳಿ ಉದ್ಯಮವನ್ನು ಅಭಿವೃದ್ಧಿ ಪಡಿಸಲು 30 ಎಕರೆ ಜಮೀನಿನಲ್ಲಿ ಸಾರ್ವಜನಿಕ-ಖಾಸಗಿ ಸಹಭಾಗಿತ್ವ (ಪಿಪಿಪಿ) ಆಧಾರದ ಮೇಲೆ ಜವಳಿ ಪಾರ್ಕ್ ನ್ನು ಸ್ಥಾಪಿಸಿ, ಜವಳಿ/ಸಿದ್ಧ ಉಡುಪು ಘಟಕಗಳನ್ನು ಸ್ಥಾಪಿಸಲು 30 ವರ್ಷಗಳ ಅವಧಿಗೆ ಲೀಸ್ ಆಧಾರದ ಮೇಲೆ ನೀಡಲು ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ.

**ಮೂಲ: ಕೈಮಗ್ಗ ಮತ್ತು ಜವಳಿ ಇಲಾಖೆ**